“ನೀನು ನಿನ್ನೆ ಹೇಳಿದ್ದು ಒಗಟಿನಂತೆ ಇದೆ. ಆ ಕೋಣೆಯಲ್ಲಿ ರಿವಾಲ್ವರ್ ಇರಬಹುದೆಂಬ ಕಲ್ಪನೆ ನಿನ್ಗೆ ಹೇಗೆ ಬಂತು?” ಮರುದಿನ ಸಂಜೆ ವಿರಾಮವಾಗಿದ್ದಾಗ ನಾನು ಕರಮಚಂದನಲ್ಲಿ ವಿಚಾರಿಸಿದೆ.

“ಬಹು ಸರಳ. ಗುಂಡನ್ನು ಸಾಕಷ್ಟು ದೂರದಿಂದಲೇ ಹಾರಿಸಿರಬೇಕೆಂದು ಹೇಳಿದ್ದೆನಲ್ವೆ. ಅಲ್ಲಿ ಅದಕ್ಕೆ ಸೂಕ್ತವಾದ ಜಾಗವೆಂದರೆ ಆ ಕಟ್ಟಡ...”

“ಆದರೆ ಅದರಲ್ಲಿ ಕಿಟಕಿಗಳೇ ಇಲ್ಲ...”

“ತಾಳು... ಅಲ್ಲಿಂದಲೇ ಗುಂಡು ಹಾರಿಸಿರಬೇಕೆಂದು ನಾವು ಒಪ್ಪಿಕೊಳ್ಳಲೇಬೇಕು. ಹಾಗಿದ್ದರೆ ಹೇಗೆ? ನಾನು ಕಟ್ಟಡದ ಗೋಡೆಯನ್ನು ಸೂಕ್ಷ್ಮವಾಗಿ ನಿರುಕಿಸಿದೆ. ಅಲ್ಲಿ ಒಂದಷ್ಟು ಜಾಗದಲ್ಲಿ ಗೋಡೆಯ ಬಣ್ಣ ಬದಲಾಗಿರುವುದು ಕಂಡಿತು. ಅದರ ಆಯತಾಕಾರ ಕಂಡಾಗ... ಅಲ್ಲೊಂದು ಕಿಟಕಿ ಇತ್ತೆಂದು ಊಹಿಸಿದೆ! ಅಲ್ಲಿ ಕೆಂಪುಕಲ್ಲಿಗೆ ಸಾರಣೆ ಮಾಡಿ, ಬಣ್ಣ ಬಳಿದು ಜಾಗ್ರತೆಯಿಂದ ಜೋಡಿಸಿದ್ದರು, ಗೋಡೆ ಎಂಬ ಭ್ರಮೆ ಬರುವ ಹಾಗೆ! ನನಗೆ ಅದರ ಉದ್ದೇಶ ಮನದಟ್ಟಾಯಿತು. ಕೊಲೆಗಾರ ಅಲ್ಲೇ ನಿಂತು ಗುಂಡು ಹಾರಿಸಿದ್ದಾನೆ, ನಂತರ ಕಲ್ಲುಗಳನ್ನು ಯಥಾ ಸ್ಥಾನದಲ್ಲಿರಿಸಿದ್ದಾನೆ! ಅಲ್ಲಿಂದ ಕ್ಯಾಬಿನ್ನಿನಲ್ಲಿದ್ದ ಸೋಮಯ್ಯ ಸ್ಪಷ್ಟವಾಗಿ ಗೋಚರಿಸುತ್ತಾನೆ. ಆ ಕೋಣೆಯಲ್ಲಿ ಯಾರಿದ್ದಾರೆಂದು ವಿಚಾರಿಸಿದಾಗ, ಎರಡು ತಿಂಗಳ ಹಿಂದೆ ಯಾರೋ ಬಾಡಿಗೆಗೆ ಪಡೆದಿದ್ದು, ಆತ ಎಷ್ಟು ಹೊತ್ತಿಗೆ ಬರುತ್ತಾನೆ, ಯಾವಾಗ ಹೋಗ್ತಾನೆ, ತಮಗೆ ತಿಳಿಯದು, ಆತನನ್ನು ತಾವು ನೋಡಿಯೇ ಇಲ್ಲವೆಂದು ಪಕ್ಕದ ಕೋಣೆಯವನು ಹೇಳಿದ. ಅಲ್ಲಿಗೆ ಅದು ಕೊಲೆಗೆ ಉಪಯೋಗಿಸಿದ ತಾಣ ಎಂಬುದು ಖಚಿತವಾಯಿತು...”

ಅಷ್ಟರಲ್ಲಿ ಮೆಟ್ಟಿಲಲ್ಲಿ ಬೂಟುಗಾಲಿನ ಸಪ್ಪಳ ಕೇಳಿ ಬಂತು. ಬಂದವನು ಡಿಸೋಜ.

“ನೀವು ಹೇಳಿದ್ದು ನೂರಕ್ಕೆ ನೂರು ನಿಜವಾಯಿತು, ಕರಮಚಂದ. ಆ ಕೋಣೆಯೊಳಗೆ ರಿವಾಲ್ವರ್ ಸಿಕ್ಕಿತು. ಅದು ಸೋಮಯ್ಯನ ರಿವಾಲ್ವರ್ ಅಂತ ಉತ್ತಯ್ಯ ಹೇಳಿದ. ಬೆರಳಚ್ಚು ತನಿಖೆಗಾಗಿ ಅದನ್ನು ರವಾನಿಸಿದ್ದೇನೆ. ಆ ಕೋಣೆ ಪೀಟರ್ ಅನ್ನುವವನದ್ದು. ಆತ ಇರೋದು ವಿದೇಶದಲ್ಲಿ. ಎರಡು ತಿಂಗಳ ಹಿಂದೆ ಬಂದಾಗ ಬಾಡಿಗೆ ಕೊಟ್ಟು ಹೋಗಿದ್ದನೆಂದು ಅವ್ನ ತಾಯಿ ಹೇಳಿದಳು. ಬಾಡಿಗೆ ಕರಾರು ಪತ್ರವೂ ಸಿಕ್ಕಿತು. ಆ ಬಾಡಿಗೆದಾರ ಯಾರು ಗೊತ್ತೆ... ಬೆಟ್ಟಪ್ಪ!”

“ಬೆಟ್ಟಪ್ಪ! ಹಾಗಿದ್ದರೆ ಪಾಲಯ್ಯ ಯಾರನ್ನು ಭೇಟಿಯಾಗಿದ್ದು? ಒಂದೊಮ್ಮೆ ಪಾಲಯ್ಯ ಭೇಟಿ ಮಾಡಿದ ನಂತ್ರವೇ ಬೆಟ್ಟಪ್ಪ ಕೊಲೆ ಮಾಡಿದ್ದ ಅಂತ ಒಪ್ಪಿಕೊಂಡರೂ, ಪಾಲಯ್ಯ ಯಾಕೆ ಸೋಮಯ್ಯನಿಗೆ ಉಗ್ಗು ಇದೆಯೆಂದು ಸುಳ್ಳು ಹೇಳಿದ?”

“ಅದು ನಮ್ಮ ತನಿಖೆಯ ಹಾದಿ ತಪ್ಪಿಸುವ ಉದ್ದೇಶ. ಏನೇನೋ ಸುಳ್ಳು ಹೇಳಿ, ನಮ್ಮನ್ನು ಮಂಗ ಮಾಡುವುದು.”

“ಆ ಬಾಡಿಗೆ ಕರಾರುಪತ್ರದಲ್ಲಿರೋ ಸಹಿ ಬೆಟ್ಟಪ್ಪನದ್ದೇ ಅಂತ ಖಚಿತಪಡಿಸಿಕೊಂಡಿದ್ದೀರೋ?”

“ಉತ್ತಯ್ಯ ಬೆಟ್ಟಪ್ಪನ ಸಹಿ ಇರುವ ಬೇರೆ ಕಾಗದ ಪತ್ರಗಳನ್ನು ನೀಡಿದ. ಸಹಿ ಮೇಲು ನೋಟಕ್ಕೆ ತಾಳೆಯಾಗುತ್ತೆ.”

“ರಿವಾಲ್ವರಿನಲ್ಲಿ ಬೆರಳಚ್ಚು ಸಿಕ್ಕರೆ, ಬೆಟ್ಟಪ್ಪನ ಮೇಲಿನ ಆರೋಪಕ್ಕೆ ಹೆಚ್ಚಿನ ಸಾಕ್ಷ್ಯ ಸಿಕ್ಕಿದಂತೆ ಆಗುತ್ತೆ, ಅಲ್ವೆ?”

“ಅದು ನಾಳೆ ಸಿಗುತ್ತದೆ. ಆಮೇಲಷ್ಟೇ ನಾವು ಬೆಟ್ಟಪ್ಪನ ಬಂಧಿಸುತ್ತೇವೆ. ನಿಮ್ಗೆ ಮಾಹಿತಿ ತಿಳಿಸೋಣ ಅಂತ ಬಂದೆ. ನಿಮ್ಗೆ ಅಲ್ಲಿ ರಿವಾಲ್ವರ್ ಇದೆ ಅನ್ನೋದು ಹೇಗೆ ಗೊತ್ತಾಯಿತು?”

ಕರಮಚಂದ ನನಗೆ ಹೇಳಿದ್ದನ್ನೇ ಆತನಿಗೂ ವಿವರಿಸಿದ.

“ಡಿಸೋಜ, ಕೂರ್ಗ್ ಹೈಟ್ಸ್ ಕಟ್ಟಡದ ಸಿಸಿಟೀವಿ ಕ್ಯಾಮೆರಾದಲ್ಲಿ ಮಧ್ಯಾಹ್ನದ ನಂತರ ಫೂಟೇಜ್